

# ಶಿಬಿ ಚಕ್ರವರ್ತಿ

■ **ಶಶಿರೇಖಾ ನಾಗೇಂದ್ರ**
ಕಲೆ: ಸಂತೋಷ್ ಸಸಿಹಿತ್ಲು

ತ್ರೇತಾಯುಗದಲ್ಲಿ ಉಷಿನಗರವೆಂಬ ರಾಜ್ಯದಲ್ಲಿ ಶಿಬಿ ಚಕ್ರವರ್ತಿ ರಾಜ್ಯವಾಳುತ್ತಿದ್ದನು. ಇವನು ಪುರು ವಂಶದವನು. ಶಿಬಿಯೂ ಪರೋಪಕಾರಿ, ದಯಾಳು, ಅತಿಥಿ ಸತ್ಕಾರದಲ್ಲಿ ಮೂರು ಲೋಕದಲ್ಲಿಯೂ ಹೆಸರು ಪಡೆದಿದ್ದು ಪ್ರಜೆಗಳನ್ನು ಮಕ್ಕಳಂತೆ ನೋಡಿಕೊಳ್ಳುತ್ತಿದ್ದ. ತನ್ನ ಅರಮನೆಗೆ ಯಾರೇ ಬರಲಿ ಅವರ ಕಷ್ಟಕಾರ್ಪಣ್ಯಗಳನ್ನು ಕೇಳಿ ಅದನ್ನು ಬಗೆಹರಿಸುತ್ತಿದ್ದ. ಶರಣು ಎಂದು ಬಂದವರನ್ನು ರಕ್ಷಿಸುತ್ತಿದ್ದ. ಅವನ ಈ ಬುದ್ಧಿಯನ್ನು ದೇವಾನುದೇವತೆಗಳು ಹೊಗಳುತ್ತಿದ್ದರು. ಒಂದು ದಿನ ಶಿಬಿ ಅರಮನೆಯಲ್ಲಿ ಗಹನವಾದ ಸಭೆ ನಡೆಸುತ್ತಿದ್ದಾಗ ಪಾರಿವಾಳ ಒಂದು ಹಾರಿ ಬಂದು ಶಿಬಿಯ ತೊಡೆಯ ಮೇಲೆ ಕುಳಿತಿತು, ಪಾರಿವಾಳ ಭಯದಿಂದ ಗಡಗಡನೆ ನಡುಗುತ್ತಿತ್ತು. ಪಾರಿವಾಳವನ್ನು ಕಂಡ ರಾಜ ಯಾಕೆ ಇಷ್ಟು ಹೆದರಿರುವೆ? ಏನು ವಿಷಯ ಹೇಳು ಎಂದನು. ಪಾರಿವಾಳವು ರಾಜನೆ ಗಿಡುಗವೊಂದು ನನ್ನ ತಿನ್ನಲು ಬೆನ್ನತ್ತಿ ಬರುತ್ತಿದೆ, ಜೀವ ಉಳಿಸಿಕೊಳಲು ನಿನ್ನಲ್ಲಿಗೆ ಬಂದೆ ಕಾಪಾಡು ಎಂದಿತು. ಶಿಬಿ, ಹೆದರಬೇಡ ನಿನ್ನನ್ನು ಕಾಪಾಡುವೆ ಎಂದನು. ಆಗ ಗಿಡುಗವೊಂದು ಹಾರಿ ಬಂದು ರಾಜ, ಈ ಪಾರಿವಾಳ ನನ್ನ ಇಂದಿನ ಆಹಾರ, ಅದನ್ನ ಅಟ್ಟಿಸಿಕೊಂಡು ಬಂದಿರುವೆ ಹಾಗಾಗಿ ಈ ಪಾರಿವಾಳವನ್ನು ಬಿಟ್ಟುಬಿಡು ಎಂದಿತು. ಶಿಬಿ ಈ ಪಾರಿವಾಳ ಅದರ ಪ್ರಾಣ ರಕ್ಷಣೆಗಾಗಿ ನನ್ನ ಬಳಿ ಬಂದಿದೆ ಹಾಗಾಗಿ ಇದರ ರಕ್ಷಣೆಯ ಭಾರ ನನ್ನದು ಇದನ್ನು ಬಿಡುವುದಿಲ್ಲ ಎಂದಾಗ ಗಿಡುಗ ನಾನು ಬಹಳ ಹಸಿವಿನಿಂದ ಬಳಲಿದ್ದೇನೆ ನಮ್ಮ ಆಹಾರಕ್ಕಾಗಿ ಬೇಟೆಯಾಡುವುದು ಪ್ರಕೃತಿಯ ನಿಯಮ ತಾನೇ! ಹಾಗಾಗಿ ನನ್ನ ಆಹಾರವನ್ನು ನೀನು ತಪ್ಪಿಸುವುದು ಸರಿಯಲ್ಲ ಎಂದಿತು.

ಗಿಡುಗವೆ, ನೀನು ಹೇಳುವುದು ಸರಿ ಆದರೆ ಈ ಪಾರಿವಾಳ ಪ್ರಾಣಭಿಕ್ಷೆಗಾಗಿ ನನ್ನ ಆಶ್ರಯಿಸಿದೆ! ಇದರ ರಕ್ಷಣೆಯ ಹೊಣೆ ನನ್ನದು, ನನ್ನಲ್ಲಿ ಶರಣು ಬಂದವರಿಗೆ ರಕ್ಷಣೆ ನೀಡುವುದು ನನ್ನ ರಾಜಧರ್ಮ ಎಂದನು. ಗಿಡುಗವು ರಾಜ, ನೀನು ಪಾರಿವಾಳವನ್ನು ರಕ್ಷಿಸಿದರೆ ನನ್ನ ಪಾಲಿನ ಆಹಾರವನ್ನು ನೀನು ಕಸಿದಂತಾಗುತ್ತದೆ ನಿನಗೆ ಮಹಾ ಪಾಪ ಬರುತ್ತದೆ ಒಂದು ಪಾರಿವಾಳಕ್ಕಾಗಿ ನೀನು ನನಗೆ ಮೋಸ ಮಾಡುವೆಯಾ? ಬಿಟ್ಟುಬಿಡು ಪಾರಿವಾಳವನ್ನು ಎಂದಿತು. ಸಾಧ್ಯವಿಲ್ಲ ಯಾವ ಕಾರಣಕ್ಕೂ ಪಾರಿವಾಳವನ್ನು ಬಿಡುವುದಿಲ್ಲ ಈಗ ನಿನ್ನ ಹಸಿವು ನೀಗಿಸಬೇಕು ತಾನೆ! ಅದಕ್ಕೆ ಪಾರಿವಾಳದ ತೂಕದಷ್ಟು ಮಾಂಸವನ್ನು ನಿನಗೆ ಕೊಡುತ್ತೇನೆ ಸರಿಯೇ? ಎಂದ. ಗಿಡುಗ ಒಪ್ಪಿತು. ಶಿಬಿ ಚಕ್ರವರ್ತಿ ಕಟುಕರನ್ನು ಕರೆಸಿ ತನ್ನ ದೇಹದಲ್ಲಿ ಪಾರಿವಾಳದ ತೂಕದಷ್ಟು ಮಾಂಸವನ್ನು ಕತ್ತರಿಸಿ ಗಿಡುಗನಿಗೆ ಕೊಡಿ ಎಂದು ಆಜ್ಞೆ ಮಾಡಿದ.

ಮಂತ್ರಿ ಮಹೋದಯರು ಬೇಡ ಮಹಾರಾಜ, ನಿನ್ನ ದೇಹದಿಂದ ಮಾಂಸ ತೆಗೆಸಬೇಡ ಬೇರೆ ಮಾಂಸವನ್ನು ತರಿಸಿಕೊಡು ಎಂದರೆ ಶಿಬಿ ಒಪ್ಪಲಿಲ್ಲ. ಪಾರಿವಾಳ ನನ್ನ ರಕ್ಷಣೆ ಕೋರಿ ಬಂದಿದೆ ಗಿಡುಗ ತನ್ನ ಆಹಾರವನ್ನು ಅರಸುತ್ತ ಪಾರಿವಾಳವನ್ನು ಹುಡುಕಿ ಬಂದಿದೆ ನಾನು ಇಬ್ಬರಿಗೂ ನ್ಯಾಯ ಒದಗಿಸಬೇಕು. ಅದಕ್ಕಾಗಿ ನನ್ನ ದೇಹದಲ್ಲಿ ಪಾರಿವಾಳದ ತೂಕದಷ್ಟು ಮಾಂಸ ಕತ್ತರಿಸಿ ಗಿಡುಗನಿಗೆ ಕೊಡಿ ಅದನ್ನು ತಿಂದು ಗಿಡುಗನ ಹಸಿವು ನಿಗಲಿ ಎಂದು ತಕ್ಕಡಿಯನ್ನು ತರಿಸಿ ಪಾರಿವಾಳವನ್ನು ತಕ್ಕಡಿಯ ಒಂದು ತಟ್ಟೆಯಲ್ಲಿ ಕೂರಿಸಿ ತನ್ನ ತೊಡೆಯ ಮಾಂಸ ಕತ್ತರಿಸಲು ಹೇಳಿದ. ಶಿಬಿಯ ತೊಡೆಯಿಂದ ಮಾಂಸ ಕತ್ತರಿಸಿ ತಕ್ಕಡಿಯ ಮೇಲೆ ಇಟ್ಟರೂ ತಕ್ಕಡಿ ಪಾರಿವಾಳದ ತೂಕಕ್ಕೆ ಏರಲಿಲ್ಲ. ಶಿಬಿ ತನ್ನ ಮತ್ತೊಂದು ತೊಡೆಯ ಮಾಂಸವನ್ನು ಕತ್ತರಿಸಿ ಇಡಲು ಹೇಳಿದ. ಕಟುಕರು ಮತ್ತೊಂದು ತೊಡೆಯ ಮಾಂಸವನ್ನು ಕತ್ತರಿಸಿ ಇಟ್ಟಾಗಲೂ ತಕ್ಕಡಿ ಪಾರಿವಾಳದ ಸಮಕ್ಕೆ ತೂಗಲಿಲ್ಲ. ಆಗ ಶಿಬಿ ತಾನೇ ತಕ್ಕಡಿಯಲ್ಲಿ ಕುಳಿತುಕೊಂಡ. ಗಿಡುಗನಿಗೆ ಹೇಳಿದ, ನೀನು ನನ್ನನ್ನು ತಿಂದು ನಿನ್ನ ಹಸಿವನ್ನು ತೀರಿಸಿಕೊ ಪಾರಿವಾಳವನ್ನು ಬಿಟ್ಟುಬಿಡು ಎಂದನು. ರಾಜನ ಈ ಉದಾರತೆಯನ್ನು ಕಂಡು ಅಲ್ಲಿದ್ದವರೆಲ್ಲ ಮಾತು ಬಾರದ ಮೂಕರಾದರು. ಗಿಡುಗ ಇಂದ್ರನಾಗಿ ಪಾರಿವಾಳ ಅಗ್ನಿಯಾಗಿ ತಮ್ಮ ನಿಜ ರೂಪವನ್ನು ತಾಳಿ ಶಿಬಿ ಚಕ್ರವರ್ತಿ ನಿನ್ನ ತ್ಯಾಗ ಬಲಿದಾನವನ್ನು ನಾವು ಮೆಚ್ಚಿದ್ದೇವೆ, ನಿನ್ನ ಗುಣವನ್ನು ದೇವತೆಗಳು ಹಾಡಿ ಹೊಗಳುತ್ತಿದ್ದರು, ಹಾಗಾಗಿ ನಾವು ನಿನ್ನ ಪರೀಕ್ಷಿಸಲು ಬಂದೆವು. ನಾವು ಇಂದ್ರ ಮತ್ತು ಅಗ್ನಿ ನಿನ್ನ ಕೀರ್ತಿ ಮೂರು ಲೋಕಗಳಲ್ಲಿಯೂ ಹರಡಲಿ, ಸೂರ್ಯ ಚಂದ್ರರಿರುವವರೆಗೂ ನಿನ್ನ ಹೆಸರು ಶಾಶ್ವತವಾಗಿರಲಿ ಎಂದರು. ಶಿಬಿಯ ದೇಹ ಮೊದಲಿನಂತಾಯಿತು. ಇಂದ್ರ ಮತ್ತು ಅಗ್ನಿಗೆ ಅತಿಥಿ ಸತ್ಕಾರ ಮಾಡಿದನು. ದೇವತೆಗಳು ಶಿಬಿಯ ಮೇಲೆ ಹೂವಿನ ಮಳೆಗರೆದರು.

(ಆಧಾರ)